# ಮೈಸೂರು ವಾರಿಯರ್ಸ್‌ಗೆ ಹೊಸ ಆಟಗಾರರ ಸೇರ್ಪಡೆ



ನಂದಕಿಶೋರ್



ಶ್ರೇಯಸ್.ಎನ್

ಮೈಸೂರು, ಆ.23 (ಡಿಡಿಆರ್)– ಕೆಪಿಎಲ್ ಟೂರ್ನಿಯ ಐದನೇ ಆವೃತ್ತಿಯ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡಕ್ಕೆ ಇಬ್ಬರು ಹೊಸ ಯುವ ಆಟಗಾರರನ್ನು ಆಯ್ಕೆ ಮಾಡುವ ಸಲುವಾಗಿ ಆ.17ರಿಂದ ನಡೆದ ಆಯ್ಕೆ ಪ್ರಕ್ರಿಯೆ ಅಂತಿಮ ಫಲಿತಾಂಶ ಹೊರ ಬಿದ್ದಿದೆ.

ಸೆ.15ರಂದು ಆರಂಭವಾಗುವ ಕೆಪಿಎಲ್ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್ ತಂಡದಲ್ಲಿ ಜೊ ಜೊ ಕ್ರಿಕೆಟ್ ಕ್ಲಬ್‌ನ ನಂದಕಿಶೋರ್ ಮತ್ತು ಎಂಯುಸಿಎಸ್‌ಸಿ ಕ್ಲಬ್‌ನ ಶ್ರೇಯಸ್.ಎನ್ ಸ್ಥಾನ ಪಡೆದಿದ್ದಾರೆ.

ಯುವ ಪ್ರತಿಭೆಗಳನ್ನು ಆಯ್ಕೆ ಮಾಡುವ ದೃಷ್ಟಿಯಿಂದ ಮೈಸೂರು ವಾರಿಯರ್ಸ್ ತಂಡದ ಕೋಚ್ ಮತ್ತು ಮಾಲೀಕರು ಮುಕ್ತ ಆಯ್ಕೆ ಪ್ರಕ್ರಿಯೆಯನ್ನು ಕಳೆದ ಬುಧವಾರ ಆರಂಭಿಸಿದ್ದರು. ಮೂರು ಪ್ರಕಾರಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಅಂತಿಮವಾಗಿ ಅಲ್‌ರೌಂಡರ್ ಶ್ರೇಯಸ್.ಎನ್ ಮತ್ತು ವೇಗದ ಬೌಲರ್ ನಂದಕೀಶೋರ್ ಆಯ್ಕೆಯಾಗಿದ್ದಾರೆ. ಈ ಇಬ್ಬರು ಆಟಗಾರರು ಕೆಪಿಎಲ್ ಪಂದ್ಯಾವಳಿಯ ಹಿನ್ನೆಲೆಯಲ್ಲಿ ಸೆ.10 ರಿಂದ ಆರಂಭವಾಗುವ ಮೈಸೂರು ವಾರಿಯರ್ಸ್ ತಂಡದ ಅಭ್ಯಾಸದಲ್ಲಿ ಸೇರಿಕೊಳ್ಳಲಿದ್ದಾರೆ.